ಪಶ್ಚಿಮ ಘಟ್ಟ ಉಳಿಸುವುದಕ್ಕೆ ಚಳುವಳಿ

೭೨೭. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಶ್ಚಿಮ ಘಟ್ಟ ಉಳಿಸಿ ಎಂದು ಕಾಲ್ನಡಿಗೆ ಚಳುವಳಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಚಳುವಳಿಯ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಜಿ.ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು)—

ಅ) ಗಮನಕ್ಕೆ ಬಂದಿದೆ.

ಆ) ಸರ್ಕಾರದ ಅರಣ್ಯ ನೀತಿಯನ್ನು ವಿವರಿಸಿ ಅವರು ಇಚ್ಚಿಸಿದ ಅರಣ್ಯ ಪ್ರದೇಶವನ್ನು ತೋರಿಸಬೇಕೆಂದು ಸಂಬಂಧಿಸಿದ ಅರಣ್ಯ ಅಧಿಕಾರಿಗಳಿಗೆ ಆದೇಶ ಕೊಡಲಾಗಿದೆ.

ಪಶ್ಚಿಮ ಘಟ್ಟದ ಕಾಡನ್ನು ಉಳಿಸಿ ಬೆಳೆಸಬೇಕೆಂಬುದೇ ಸರ್ಕಾರದ ಉದ್ದೇಶ. ಈ ಪ್ರಕಾರ ಕ್ರಮವನ್ನು ಕೈಕೊಂಡಿದೆ.

೧೨-೦೦ ಮಧ್ಯಾಹ್ನ

ಶ್ರೀ ಐ.ಬಿ. ಶಂಕರ್.—ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ ನಾನು ಸಮಾಜಾರವನ್ನು ಕೇಳಿದಾಗ ಸರ್ಕಾರದವರು ಏನೂ ಸಹಕಾರವನ್ನು ಕೊಟ್ಟಿಲ್ಲವೆಂದು ಪಶ್ಚಿಮ ಘಟ್ಟ ಉಳಿಸಿ ಚಳವಳಿಯ ಅಧ್ಯಕ್ಷರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆ ? ಈ ಉದ್ದೇಶಕ್ಕಾಗಿ ಸರ್ಕಾರ ಸಾಕಷ್ಟು ಹಣವನ್ನು ಕೊಟ್ಟಿದೆ ಎಂದು ನಾನು ಕೇಳಿದ್ದೇನೆ. ಆದರೆ ನಮ್ಮ ಜಿಲ್ಲೆಯಲ್ಲಿ ಹಣ ಉಪಯೋಗ ಆಗುತ್ತಿಲ್ಲ. ಅಲ್ಲಿ ಹಣ ಉಪಯೋಗವಾಗದಿದ್ದರೆ ಅದೇ ಹಣವನ್ನು ಬೇರೆ ಕಡೆಗೆ ಉಪಯೋಗ ಮಾಡುವುದಕ್ಕೆ ಅವಕಾಶ ಇದೆಯೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಜಿ.ಎಸ್. ಬಾಗಲಕೋಟಿ,—ಪಶ್ಚಿಮ ಘಟ್ಟ ಉಳಿಸಿ ಯೋಜನೆಯ ಕೆಳಗೆ ಚಳವಳಿ ಮಾಡುತ್ತಿರುವ ಅರಣ್ಯ ಪ್ರೇಮಿಗಳಿಗೆ ಸರ್ಕಾರ ಸಹಾಯವನ್ನು ಕೊಟ್ಟಿಲ್ಲವೆಂದು ಹೇಳುವುದು ಸುಳ್ಳು. ಸತ್ಯಕ್ಕೆ ದೂರವಾದುದು. ಸರ್ಕಾರ ಅವರಿಗೆ ಎಲ್ಲಾ ರೀತಿಯ ಸಹಕಾರವನ್ನೂ ಕೊಟ್ಟಿದೆ. ಅವರು ಎಲ್ಲೆಲ್ಲಿ ಅರಣ್ಯ ಪ್ರದೇಶವನ್ನು ನೋಡಬೇಕೆಂದು ಕೇಳಿದ್ದರೋ ಅಲ್ಲೆಲ್ಲಾ ಅವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇವೆ. ಅವರು ಕೇಳಿದ ಎಲ್ಲಾ ಮಾಹಿತಿಗಳನ್ನೂ ಸರ್ಕಾರ ಒದಗಿಸಿಕೊಟ್ಟಿದೆ.

ಇನ್ನು ಎರಡನೆಯದಾಗಿ, ಪಶ್ಚಿಮ ಘಟ್ಟ ಉಳಿಸಿ ಯೋಜನೆಗೆ ಕೊಟ್ಟಂಥ ಹಣ ಉಳಿತಾಯ ಆಗಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಬಗ್ಗೆ ನಾನು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಐ.ಬಿ. ಶಂಕರ್.—ಮಾನ್ಯ ಅಧ್ಯಕ್ಷರೆ, ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ನನಗೆ ತಿಳಿದ ಪ್ರಕಾರ ೮೫ ಸಾವಿರಕ್ಕಿಂತ ಹೆಚ್ಚಿಗೆ ಹಣ ದುರುಪಯೋಗವಾಗಿದೆಯೆಂದು ಮಂಡಲ ಪಂಚಾಯತ್‌ನ ಪ್ರಧಾನರು ಆಪಾದನೆಯನ್ನು ಮಾಡಿದ್ದಾರೆ. ಆ ಹಣ ದುರುಪಯೋಗ ಆಗಿದೆಯೆ ? ಇಲ್ಲವೆ ? ಎಂಬುದನ್ನು ಸಭೆಗೆ ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಪ್ರಾರ್ಥಿಸುತ್ತೇನೆ.

ಶ್ರೀ ಜಿ.ಎಸ್. ಬಾಗಲಕೋಟಿ.—ಮಾನ್ಯ ಸದಸ್ಯರು ಹೇಳಿದಹಾಗೆ ಅಂಥದ್ದು ಏನಾದರೂ ಇದ್ದಲ್ಲಿ ಸನ್ಮಾನ್ಯ ಸದಸ್ಯರು ನನಗೆ ವಿವರಗಳನ್ನು ಕೊಟ್ಟಲ್ಲಿ ಯಾರೇ ಅಧಿಕಾರಿಗಳಿರಲಿ ಅವರ ಮೇಲೆ ತಕ್ಷಣವೇ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಇದು ಸರ್ಕಾರ ಮಾಡತಕ್ಕಂಥ ಕೆಲಸ. ಪಶ್ಚಿಮ ಘಟ್ಟದ ಅನೇಕ ಪ್ರಮುಖರು ಕಾಲುನಡಿದೆಯಲ್ಲಿಯೇ ಚಳುವಳಿಯನ್ನು ನಡೆಸಿ ಕ್ರಮ ಕೈಗೊಂಡಿದ್ದಾರೆ. ಅವರ ಮನಸ್ಸಿನಲ್ಲಿ ಏನು ಭಾವನೆ ಇದೆ ಅದನ್ನು ಅರ್ಥ ಮಾಡಿಕೊಂಡು ಅವರ

ಕಾರ್ಯವನ್ನು ನಡೆಸುವುದಕ್ಕೆ ತಾವು ಏನಾದರೂ ಯೋಚನೆ ಮಾಡುತ್ತೀರಾ ? ಎರಡನೆಯದಾಗಿ ಕಾಡನ್ನು ಉಳಿಸುವ ಬದಲಾಗಿ ಟಾಟಾ ಬಿರ್ಲಾರವರನ್ನು ಉಳಿಸುವ ಸಲುವಾಗಿ ನೀಲಗಿರಿ ಮರಗಳನ್ನು ಬೆಳೆಸತಕ್ಕಂಥ ಯೋಜನೆ ಏನು ಇದೆ ಅದನ್ನು ಇನ್ನು ಮುಂದಾದರೂ ಕೈಬಿಡುತ್ತೀರಾ ಎಂದು ಕೇಳಂತ್ತೇನೆ.

ಶ್ರೀ ಜಿ.ಎಸ್. ಬಾಗಲಕೋಟೆ.—ಪಶ್ಚಿಮ ಘಟ್ಟಗಳನ್ನು ಉಳಿಸಿ ಎನ್ನುವ ಚಳುವಳಿಗಾರರಿಗೆ ಸರ್ಕಾರ ಎಲ್ಲಾ ರೀತಿಯ ಸಹಕಾರವನ್ನು ಮಾಡುತ್ತಿದೆ. ಈಗಾಗಲೇ ಹೇಳಿದ್ದೇನೆ. ಅವರ ಜೊತೆಯಲ್ಲಿ ಬೇರೆ ರೀತಿಯ ಮಾತುಗಳನ್ನು ನಡೆಸಿ ಅತ್ಯಾವಶ್ಯಕ ಕಂಡುಬಂದಲ್ಲಿ ಸರ್ಕಾರ ಯಾವರೀತಿಯ ಸಹಕಾರವನ್ನು ಕೊಡುವ ವಿಚಾರದಲ್ಲಿ ಹಿಂದೆ ಸರಿಯುವುದಿಲ್ಲ. ಜೊತೆಗೆ ಮಾನ್ಯ ಸದಸ್ಯರು ನೀಲಗಿರಿ ಮರಗಳನ್ನು ಬೆಳೆಸುವ ಬಗ್ಗೆ ಹೇಳಿದ್ದಾರೆ. ನೀಲಗಿರಿ ಮರಗಳನ್ನು ಬೆಳೆಯುತ್ತಿರುವುದು ಕೇವಲ ಕಾರ್ಖಾನೆಗಳಿಗೆ ಕೊಡುವುದಕ್ಕೆ ಮಾತ್ರವಲ್ಲ, ಬಡವರಿಗೆ ಬೇಕಾದಂಥ ಉರುವಲು ಕಟ್ಟಿಗೆಗೋಸ್ಕರವಾಗಿಯೂ ಕೂಡ ನಿರ್ದಿಷ್ಟವಾದ ಪ್ರದೇಶಗಳಲ್ಲಿ ಬೆಳೆಸುತ್ತಿದ್ದೇವೆ. ಈ ಬಗ್ಗೆ ಹೆಚ್ಚಿನ ಮಾಹಿತಿ ನಮ್ಮಲ್ಲಿ ಇಲ್ಲ, ಮಾನ್ಯ ಸದಸ್ಯರು ಬೇರೆ ರೀತಿಯಲ್ಲಿ ಪ್ರಶ್ನೆ ಕೇಳಿದರೆ ಉತ್ತರವನ್ನು ಕೊಡುತ್ತೇನೆ.

ರಾಜ್ಯದ ಅರಣ್ಯದಲ್ಲಿರುವ ಹುಲಿಗಳು

೧೮೬. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ರಾಜ್ಯದ ಅರಣ್ಯಗಳಲ್ಲಿರುವ ಹುಲಿಗಳ ಸಂಖ್ಯೆ ಎಷ್ಟು ?

೨) ಈ ಹುಲಿಗಳನ್ನು ಯಾವಾಗ ಸಮೀಕ್ಷೆ ಮಾಡಲಾಯಿತು ?

೩) ಕಳೆದ ಮೂರು ವರ್ಷಗಳಲ್ಲಿ ಅರಣ್ಯಗಳಲ್ಲಿ ಹುಲಿಗಳ ಹತ್ಯೆ ನಡೆದಿದ್ದೀತೆ ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ?

೪) ಹುಲಿಗಳ ಸಂರಕ್ಷಣೆಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಜಿ.ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

೧) ರಾಜ್ಯದಲ್ಲಿರುವ ಅರಣ್ಯಗಳಲ್ಲಿ ಸುಮಾರು ೨೦೨ ಹುಲಿಗಳಿರುತ್ತದೆ.

೨) ಹುಲಿಗಳ ಸಮೀಕ್ಷೆಯನ್ನು ೧೯೮೪ರಲ್ಲಿ ಮಾಡಲಾಯಿತು.

೩) –ಇಲ್ಲ–

೪) ಇಡೀ ಬಂಡೀಪುರವನ್ನು ರಾಷ್ಟ್ರೀಯ ಉದ್ಯಾನವನವನ್ನಾಗಿ ಹುಲಿ ಯೋಜನೆಯ ಅಡಿಯಲ್ಲಿ ತರಲಾಗಿದೆ. ಹಾಗೂ ಸರ್ಕಾರದವರು ಐದು ರಾಷ್ಟ್ರೀಯ ಉದ್ಯಾನವನಗಳನ್ನು ಮತ್ತು ೧೮ ಅಭಯಾರಣ್ಯಗಳನ್ನು ಹುಲಿ ಮತ್ತಿತರ ವನ್ಯ ಪ್ರಾಣಿಗಳ ಸಂರಕ್ಷಣೆಗಾಗಿ ರಚಿಸಲಾಗಿದೆ. ಹುಲಿ ಮತ್ತಿತರ ವನ್ಯಪ್ರಾಣಿಗಳನ್ನು ಅವ್ಯಾಹತವಾಗಿ ರಕ್ಷಿಸಲು ಇಲಾಖೆಯ ರಕ್ಷಣೆ ದಳಗಳಿಗೆ ನಿಸ್ತಂತು, ವಾಹನ, ಆಯುಧಗಳು ಮುಂತಾದವುಗಳನ್ನು ಒದಗಿಸಲಾಗಿದೆ.

ಶ್ರೀ ವೇದಾಂತ ಹೆಮ್ಮಿಗೆ.— ಮಾನ್ಯ ಅಧ್ಯಕ್ಷರೇ ೧೯೮೪ರಲ್ಲಿ ಸಮೀಕ್ಷೆ ನಡೆಸಿ ೨೦೨ ಹುಲಿಗಳು ಇರುತ್ತವೆಂದು ಹೇಳಿದ್ದಾರೆ. ಈಗ ೧೯೮೭ ರಿಂದ ಈ ಮೂರು ವರ್ಷಗಳಲ್ಲಿ ಹುಲಿಗಳ ಸಂಖ್ಯೆ ಎಷ್ಟು ಜಾಸ್ತಿಯಾಗಿದೆ ಎನ್ನುವುದನ್ನು ಹೇಳುವುದಕ್ಕೆ ಅಂಕಿಅಂಶಗಳು ಇದೆಯೇ? ಸಮೀಕ್ಷೆಯನ್ನು ಎಷ್ಟು ವರ್ಷಗಳಿಗೆ ಒಂದುಬಾರಿ ನಡೆಸುತ್ತೀರಿ? ಸಮೀಕ್ಷೆಯನ್ನು ನಡೆಸತಕ್ಕಂಥ ಜನರು ಯಾರು? ಅವರು ಸಮೀಕ್ಷೆಯನ್ನು ನಡೆಸಲು ಪರಿಣತಿಯನ್ನು ಪಡೆದಿರುತ್ತಾರೆಯೇ ಎಂಬುದನ್ನು ತಿಳಿಸಬೇಕು?

ಶ್ರೀ ಜಿ.ಎಸ್. ಬಾಗಲಕೋಟೆ.— ಮಾನ್ಯ ಅಧ್ಯಕ್ಷರೇ, ೧೯೮೪ ರಿಂದ ಈಚೆಗೆ ನಿಶ್ಚಿತವಾಗಿ ಹುಲಿಗಳ ಸಂಖ್ಯೆ ಜಾಸ್ತಿಯಾಗಿದೆ. ಎಷ್ಟು ಜಾಸ್ತಿಯಾಗಿದೆ ಎನ್ನುವ ಬಗ್ಗೆ ವಿವರಗಳು ಸದ್ಯಕ್ಕೆ ನಮ್ಮಲ್ಲಿ ಇಲ್ಲ. ಜೊತೆಗೆ ಹುಲಿಗಳನ್ನು ಯಾರು ಸಮೀಕ್ಷೆ ನಡೆಸುತ್ತಾರೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅರಣ್ಯ ಇಲಾಖೆಯಲ್ಲಿ ಪ್ರಾಣಿಗಳ ಒಂದು ಸ್ವಭಾವವನ್ನು ಅರಿತಿರುವ ಪರಿಣತರು ಹುಲಿಗಳ ಸಮೀಕ್ಷೆ